



# ತೇಲುವ ಜಲಸಸ್ಯ

ಚಿತ್ರ–ಲೇಖನ:
**ರಾಮಪ್ರಸಾದ. ಬಿ. ಹೊಸಪೇಟೆ**

ನೀರಾವರಿ ಗದ್ದೆಗಳ ಮಗ್ಗುಲಲ್ಲಿ ಕಂಡು ಬರುವ ಚಿಕ್ಕಪುಟ್ಟ ಕಾಲುವೆಗಳಲ್ಲಿ ನಿರಂತರ ನೀರು ಹರಿವ ಕಾರಣ ಅಲ್ಲಲ್ಲಿ ತಿಳಿ ನೀಲಿ ಅಥವಾ ನೇರಳೆ ಬಣ್ಣದ ಹೂಬಿಡುವ 'ವಾಟರ್ ಹಯಾಸಿಂತ್'ಗಳು ನೋಡುಗರ ಮನಸೆಳೆಯುತ್ತವೆ. ಕಡು ಹಸಿರಿನ ವೃತ್ತಾಕಾರದ ಅಥವಾ ಮೊಟ್ಟೆಯಾಕಾರದ ದಪ್ಪನೆಯ ಎಲೆಗಳು ನೀರಿನ ಮೇಲೆ ತೇಲುತ್ತಿರುವುದನ್ನು ನೋಡಬಹುದು. ಸುಮಾರು ಮೂರು ಅಡಿ ಎತ್ತರದವರೆಗೂ ಬೆಳೆಯಬಲ್ಲ ಈ ಜಲಸಸ್ಯವನ್ನು 'ಈಕ್ಹೋರಿಯಾ ಕ್ರಾಸಿಪ್ಸ್' ಎಂಬ ವೈಜ್ಞಾನಿಕ ಹೆಸರಿನಿಂದಲೂ ಗುರುತಿಸುತ್ತಾರೆ. ಇದರ ಬೇರುಗಳು ನೀರಲ್ಲಿ ಕವಲೊಡೆದು ಕಡುವಾದ ಬಣ್ಣವನ್ನು ಹೊಂದಿರುತ್ತವೆ.

ಸ್ವಲ್ಪ ಅವಕಾಶ ಸಿಕ್ಕರೂ ಸಾಕು ಈ ಸಸ್ಯ ಪೊಗದಸ್ತಾಗಿ ಬೆಳೆಯುತ್ತದೆ. ಕೆರೆ ಅಥವಾ ನೀರಿರುವ ತಾಣಗಳಲ್ಲಿ ಚಾಪೆಯಂತೆ ವ್ಯಾಪಿಸಿಬಿಡುತ್ತದೆ. ನೀರಿನ ಮೇಲ್ಮೈಯನ್ನು ಈ ಸಸ್ಯ ಸಂಪೂರ್ಣ ಆವರಿಸಿದ್ದೇ ಆದರೆ ಆಮ್ಲಜನಕದ ಕೊರತೆಗಾಗಿ ಕೆರೆಯಲ್ಲಿನ ಮೀನಿನಂತಹ ಜಲಚರಗಳು ಸಾಯಲೂಬಹುದು. ನೀರಿನಲ್ಲಿ ಬೆಳೆಯುವ ಎಲ್ಲಾ ಸಸ್ಯಗಳು ಸಾಮಾನ್ಯವಾಗಿ ಸೂಕ್ಷ್ಮಾಣುಜೀವಿಗಳಿಗೆ ಅಥವಾ ಇತರ ಜಲಚರಗಳಿಗೆ ಉಪಯೋಗಕಾರಿಯಾಗಿರುತ್ತವೆ. ಒಂದು ವೇಳೆ ಸಸ್ಯ ಕೊಳೆತರೆ ಸಸ್ಯವನ್ನು ಕೊಳೆಸುವ ಬ್ಯಾಕ್ಟೀರಿಯಾಗಳು ಮತ್ತು ಫಂಗೈಗಳು, ಜಲಚರಗಳಿಗೆ ಆಹಾರವನ್ನು ಒದಗಿಸುತ್ತವೆ.

ಮೂಲತಃ ಇದು ದಕ್ಷಿಣ ಅಮೆರಿಕದ ಸಸ್ಯ. ಕಳೆದ ವರ್ಷ ಈ ಜಲಸಸ್ಯವನ್ನು ಬೆಳೆಸುವುದು ಮತ್ತು ಮಾರುವುದನ್ನು ಯೂರೋಪಿಯನ್ ಒಕ್ಕೂಟವು ನಿಷೇಧಿಸಿ ಸುದ್ದಿ ಮಾಡಿತು. ಸ್ಪೇನ್ ಮತ್ತು ಪೋರ್ಚುಗಲ್ ದೇಶಗಳಲ್ಲಿ ವಿಶಾಲ ಕೆರೆ, ಸರೋವರಗಳಲ್ಲಿ ದಟ್ಟವಾಗಿ ಬೆಳೆಯುವ ಈ ಜಲಸಸ್ಯವನ್ನು ಪೂರ್ತಿ ನಿಷೇಧಿಸಲಾಗಿದೆ. ಅಲ್ಲಿ ಜಲಕ್ರೀಡೆಗೆ, ದೋಣಿ ಸವಾರಿಗೆ ಮತ್ತು ನೀರಾವರಿ ಸೌಲಭ್ಯಗಳಿಗೂ ಈ ಜಲಸಸ್ಯ ಅಡ್ಡಿಯಾಗುತ್ತದೆ ಎನ್ನುವುದೇ ಮುಖ್ಯ ದೂರು. ಚಳಿಪ್ರದೇಶಗಳಲ್ಲಿ ಈ ಸಸ್ಯಗಳು ಬೇಗನೆ ಸಾಯುತ್ತವೆ. ಆದರೆ ಬೆಚ್ಚಗಿನ ವಾತಾವರಣ ಇರುವ ಯೂರೋಪಿಯನ್ ದೇಶಗಳಲ್ಲಿ ಬೆಳೆದರೂ ಜನರಿಗೆ ಬೇಡವಾಗಿದೆ.